ಪರಿಗಣಿಸಿ ಆಣೇವಾರು ಮಾಡುವಂಥ ವ್ಯವಸ್ಥೆ ಇದೆ. ಆದರೆ ಈಗ ಬದಲಾದ ಕಾಲದಲ್ಲಿ ಹೊಸದಾಗಿ ಎಲ್ಲ ಬೆಳೆಗಳ ಬಗ್ಗೆ ಆಣೇವಾರಿ ತೆಗೆದುಕೊಳ್ಳುವ ಪದ್ಧತಿ ಇಲ್ಲ. ಎಲ್ಲ ಬೆಳೆಗಳ ಬಗ್ಗೆ ಇಳುವರಿ ಎಷ್ಟು ಬರುತ್ತದೆ ಎಂದು ತೆಗೆದುಕೊಳ್ಳಬೇಕು. ವಕ್ಕಲುತನ ಇಲಾಖೆಯವರು ಯಾವ್ಯಾಯವ ಬೆಳೆ ಎಷ್ಟು ಪ್ರಮಾಣದಲ್ಲಿ ಬರುತ್ತದೆ ಎಂದು ಸರ್ಕಾರ ನಿಗದಿಪಡಿಸಿದ ಗುರಿ ಏನಿದೆ, ಈ ಇಳುವರಿಗೆ ಅನುಗುಣವಾಗಿ ತೆಗೆದುಕೊಳ್ಳಬೇಕೇ ವಿನಃ ಬ್ರಿಟಿಷ್ ಪದ್ಧತಿಯಿಂದ ರೈತರಿಗೆ ಅನ್ಯಾಯವಾಗುತ್ತದೆ. ಅದಕ್ಕಾಗಿ ನಾನು ಸಲಹೆ ಕೊಡುವುದೇನೆಂದರೆ, ಈ ಬಗ್ಗೆ ಆಣೇವಾರಿ ಪದ್ಧತಿಯನ್ನು ಬದಲಾವಣೆ ಮಾಡಲಿಕ್ಕೆ ಹೊಸ ವಿಧಾನಗಳನ್ನು ಕಂಡುಹಿಡಿಯುವುದಕ್ಕೆ ಒಂದು ಸದನದ ಸಮಿತಿಯನ್ನು ಮಾಡಿದರೆ ಒಳ್ಳೆಯದು. ಏಕೆಂದರೆ ಇದು ಬಹಳ ಮಹತ್ವದ ವಿಷಯ. ಈಗ ರೈತರಿಗೆ ಈಗಾಗಲೇ ಸಾಲ ಮನ್ನಾ ವಿಚಾರದಲ್ಲಿ ಮತ್ತು ಬರಗಾಲ ವಿಚಾರದಲ್ಲಿ ಕೋಟ್ಯಾಂತರ ರೂಪಾಯಿ ಹಣ ನಷ್ಟವಾಗಿದೆ. ರೈತರಿಗೆ ತುಂಬಲಾರದ ಅನ್ಯಾಯವಾಗಿದೆ. ಆದ್ದರಿಂದ ಇದನ್ನು ಸಮಗ್ರವಾಗಿ ವಿಚಾರ ಮಾಡುವ ಅವಶ್ಯಕತೆ ಇದೆ. ಆದ್ದರಿಂದ ಒಂದು ಸದನದ ಸಮಿತಿಯನ್ನು ನೇಮಿಸಿ ಈ ಬಗ್ಗೆ ಪರಿಪೂರ್ಣವಾಗಿ ಈಗಿನ ಕಾನೂನಿಗೆ ಬದಲಾವಣೆ ಮಾಡಬೇಕೆಂದು ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಸಿ. ಸಿದ್ದನಗೌಡರ್ :– ಇಲ್ಲಿ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನವರು ಮಾಡಿದ್ದನ್ನು ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರು ಒಪ್ಪುವುದಿಲ್ಲ. ಡಿ.ಸಿ. ಅಥವಾ ತಹಸೀಲ್ದಾರರು ಕೇಳುವುದಿಲ್ಲ. ವಿಲೇಜ್ ಆಕೌಂಟೆಂಟ್ ಬರೆದದ್ದನ್ನು ಕೂಡ ಅವರು ಒಪ್ಪುವುದಿಲ್ಲ. ನಿಜವಾದ ಪೀಕ್ ಏನಿದೆ, ಅದನ್ನು ಬರೆಯತಕ್ಕದ್ದನ್ನು ಮಾಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ಸಿ. ಬೈರೇಗೌಡ :– ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ, ರೈತರು ಬೆಳೆದ ಬೆಳೆಯ ಪೈಕಿ ಒಟ್ಟು ಬೆಳೆಯಲ್ಲಿ ಶೇಕಡಾ 5ರಷ್ಟು ತಹಸೀಲ್ದಾರರು, ಶೇಕಡಾ 20ರಷ್ಟು ರೆವಿನ್ಯೂ ಇನ್‌ಸ್ಪೆಕ್ಟರ್ ಅವರು ಟಿಸ್ಟ್ ಮಾಡಬೇಕೆಂದು ಹೇಳಿದ್ದಾರೆ. ಹಾಗಾದರೆ 1988–89ರಲ್ಲಿ ಸಿಗ್ಗಾವಿ ಮತ್ತು ಸವಣೂರು ತಾಲ್ಲೂಕುಗಳಲ್ಲಿ ಯಾವ್ಯಾವ ಗ್ರಾಮಗಳಲ್ಲಿ ಶೇಕಡಾ 5ರಷ್ಟು ತಹಸೀಲ್ದಾರರು ಟಿಸ್ಟ್ ಮಾಡಿದ್ದಾರೆ? ಮತ್ತು ಶೇಕಡಾ 20ರಷ್ಟು ರೆವಿನ್ಯೂ ಇನ್‌ಸ್ಪೆಕ್ಟರ್‌ಗಳು ಟಿಸ್ಟ್ ಮಾಡಿದ್ದಾರೆ ಎನ್ನುವುದನ್ನು ದಯವಿಟ್ಟು ತಿಳಿಸುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ನನ್ನ ಹತ್ತಿರ ಲಿಸ್ಟ್ ಇದೆ, ಬೇಕಾದರೆ ತಮಗೆ ಕೊಡುತ್ತೇನೆ. 1988–89ರಲ್ಲಿ 43 ಹಳ್ಳಿಗಳಲ್ಲಿ ಇನ್‌ಸ್ಪೆಕ್ಷನ್ ಮಾಡಲಾಗಿದೆ, 11 ಹಳ್ಳಿಗಳನ್ನು ವಿಸಿಟ್ ಮಾಡಲಾಗಿದೆ. ಬೇಕಾದರೆ ತಮಗೆ ಎಲ್ಲಾ ಮಾಹಿತಿ ಕೊಡುತ್ತೇನೆ. ಮತ್ತೆ ಒಂದೆರಡು ಸಲಹೆಗಳನ್ನು ಕೊಟ್ಟಿದ್ದಾರೆ, ಇವುಗಳ ಬಗ್ಗೆ ಸಮಗ್ರವಾಗಿ ಯೋಚನೆ ಮಾಡತಕ್ಕದ್ದು ಅವಶ್ಯಕತೆ ಇದೆ. ಏಕೆಂದರೆ, ಇದೇನು ಹೊಸದಾಗಿ ನಾನು ಸೃಷ್ಟಿ ಮಾಡಿಲ್ಲ, ಎಲ್ಲಾ ಸರ್ಕಾರದವರೂ ಇದನ್ನೇ ಫಾಲೋ ಮಾಡಿಕೊಂಡು ಬಂದಿದ್ದಾರೆ. ಇವತ್ತೂ ಅದೇ ಪದ್ಧತಿ ಇದೆ. Even if you come, you have to follows the same procedure. ನಾನು ಅದಕ್ಕೇ ಹೇಳಿದೆ. ನಾವು ಮಾಡಿದ್ದನ್ನು ಬ್ಯಾಂಕ್‌ನವರು, ರಿಸರ್ವ್ ಬ್ಯಾಂಕಿನವರು ಎಲ್ಲರೂ ಒಪ್ಪಬೇಕು. ತಾವು ಸೂಸ ಬದಲಾವಣೆ ಮಾಡಬೇಕೆಂದು ಒಂದೆರಡು ಪಾಯಿಂಟ್ ತಾವು ಹೇಳಿದ್ದೀರಿ. ಇದರ ಬಗ್ಗೆ ಖಂಡಿತವಾಗಿಯೂ ಅಧಿಕಾರಿಗಳನ್ನು ಕರೆಸಿ, ಯಾರಿಗೆ ಇದರಲ್ಲಿ ಆಸಕ್ತಿ ಇದೆ ಅನುಭವ ಇದೆ, ಅಂತಹವರನ್ನು ಕರೆಸಿ, ಚರ್ಚಿಸುವ ಮೂಲಕ ಇದನ್ನು ಪರಿಶೀಲಿಸುತ್ತೇನೆ.

ನಾಡ ಕಚೇರಿಗಳ ಕೆಲಸಗಳ ಬಗ್ಗೆ

632. ಶ್ರೀ ಬಿ.ಎಸ್. ಚವಾಣ್ (ಶಹಬಾದ್) : ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ?

ಅ) ಹೋಬಳಿ ಮಟ್ಟದಲ್ಲಿರುವ ನಾಡ ಕಚೇರಿಗಳ ಕೆಲಸಗಳೇನು;

ಆ) ನಾಡ ಕಚೇರಿಗಳಲ್ಲಿ ಪಾಣಿ, ಲಾವಣಿ, ಟೆನೆನ್ಸಿ ಸರ್ಟಿಫಿಕೇಟ್, ನೋ ಡ್ಯೂ ಸರ್ಟಿಫಿಕೇಟ್, ಕ್ಯಾಸ್ಟ್ ಸರ್ಟಿಫಿಕೇಟ್, ಸಂಬಂಧಪಟ್ಟಿರುವ ಹಳ್ಳಿಗಳ ಕಾಗದ ಸಿಗುವುದಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು;

ಇ) ನಾಡ ಕಚೇರಿಯ ಅಧಿಕಾರಿಗಳು ಹಾಗೂ ಕಂದಾಯ ನಿರೀಕ್ಷಕರು ಹಾಗೂ ಗ್ರಾಮ ಲೆಖಪಾಲಕರೂ ಯಾರೂ ಕೇಂದ್ರ ಸ್ಥಳದಲ್ಲಿ ಇರದಿರುವುದಕ್ಕೆ ಕಾರಣವೇನು, ಜನರಿಗೆ ಆಗುತ್ತಿರುವ ಈ ಅನಾನುಕೂಲತೆ ಸರಿಪಡಿಸಲಾಗುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಯವರು) :–

ಅ) ಹೋಬಳಿ ಮಟ್ಟದ ನಾಡ ಕಚೇರಿಗಳಲ್ಲಿ ಈ ಕೆಳಕಂಡ ಕಾರ್ಯಗಳನ್ನು ನಿರ್ವಹಿಸಲಾಗುತ್ತಿದೆ

1. ವೃದ್ಧಾಪ್ಯ ವೇತನ ಮತ್ತು ಅಂಗವಿಕಲರ ಭತ್ಯೆ ಮಂಜೂರಾತಿ.
2. ಬೆಂಕಿ ಮತ್ತು ಪ್ರವಾಹದಿಂದ ನೊಂದವರಿಗೆ ಪರಿಹಾರ ನೀಡುವಿಕೆ.
3. ಟಿ.ಟಿ. ಶುಲ್ಕ ವಿಧಿಸುವುದು.
4. ತಕರಾರು ಇಲ್ಲದೆ ಮ್ಯುಟೇಶನ್ ಪ್ರಕರಣಗಳ ವಿಲೇವಾರಿ.
5. ಅಗತ್ಯ ವಸ್ತುಗಳನ್ನು ವಶಪಡಿಸಿಕೊಳ್ಳುವುದು ಹಾಗೂ ತಪ್ಪಿತಸ್ಥರಿಗೆ ದಂಡ ವಿಧಿಸುವುದು.
6. ಸರ್ಕಾರದ ಬಾಕಿ ವಸೂಲಾತಿ ಮತ್ತು ಜಮಾ ಹಾಗೂ ಡಿ.ಸಿ.ಬಿ. ಲೆಕ್ಕಗಳ ನಿರ್ವಹಣೆ.
7. ಕರ್ನಾಟಕ ನೀರಾವರಿ ಕಾಯಿದೆ, 1967ರಂತೆ ನೀರಿನ ಕಂದಾಯ ಮತ್ತು ಸುಧಾರಣೆ ಮಂತಿಕೆಯನ್ನು ಹಾಕುವುದು.
8. ದೃಢೀಕರಣ ಪತ್ರ ನೀಡುವುದು.
9. ಅಧಿಕೃತ ವ್ಯವಸಾಯಗಾರರಿಗೆ ದೃಢೀಕರಣ ಪತ್ರ ನೀಡಿಕೆ.
10. ಮುಜರಾಯಿ ಸಂಸ್ಥೆಗಳ ನಿರ್ವಹಣೆ ಮತ್ತು ತನಿಖೆ.
11. ದರಖಾಸ್ತು ರೆಕಾರ್ಡುಗಳ ತಯಾರಿಕೆ.
12. ಗ್ರಾಮ ಲೆಕ್ಕಿಗರ ಮತ್ತು ಕಂದಾಯ ತನಿಖಾಧಿಕಾರಿಗಳ ಕಚೇರಿ ಮತ್ತು ದಫ್ತರ ಪುಸ್ತಕಗಳ ತನಿಖೆ.
13. ಸ್ವಾಧೀನ ಪ್ರಕರಣಗಳ ಕಡತ ತಯಾರಿಕೆ.
14. ಜನನ ಮತ್ತು ಮರಣ ದಾಖಲೆಗಳ ನಿರ್ವಹಣೆ.
15. ಹಸಿರು ಮತ್ತು ಹಳದಿ ಪಡಿತರ ಕಾರ್ಡುಗಳ ವಿತರಣೆ.
16. ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ದೃಢೀಕರಣ ಪತ್ರ ನೀಡುವಿಕೆ.
17. ಗ್ರಾಮದ ಅಂಕಿ ಸಂಖ್ಯೆಗಳನ್ನು ನಿರ್ವಹಿಸುವ ಬಗ್ಗೆ.
18. ಬೆಳೆ ಕಟಾವು ಪ್ರಯೋಗಗಳನ್ನು ಮಾಡುವುದು.
19. ಆದಾಯ ದೃಢೀಕರಣ ಪತ್ರಗಳನ್ನು ಕೊಡುವುದು.
20. ವಿಧವಾ ಮಾಶಾಸನವನ್ನು ಮಂಜೂರು ಮಾಡುವುದು.

ಆ) ಬಂದಿಲ್ಲ

ಇ) ನಾಡ ಕಚೇರಿಯ ಉಪ ತಹಸೀಲ್ದಾರ್, ಕಂದಾಯ ನಿರೀಕ್ಷಕರು ಹಾಗೂ ಗ್ರಾಮ ಲೆಕ್ಕಿಗರು ಕೇಂದ್ರ ಸ್ಥಾನದಲ್ಲಿ ವಾಸಮಾಡುವುದು ಕಡ್ಡಾಯವಾಗಿದೆ. ಯಾವುದೇ ಕಾರಣದಿಂದ ಕೇಂದ್ರ ಸ್ಥಾನದಲ್ಲಿ ವಾಸಿಸದೆ ಅದರಿಂದ ಜನರಿಗೆ ತೊಂದರೆಯಾಗುತ್ತಿದೆಯೆಂದು ನಿರ್ದಿಷ್ಟ ಪ್ರಕರಣಗಳು ಬಂದಲ್ಲಿ ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಬಿ.ಎಸ್. ಚವಾಣ್ :– ಸನ್ಮಾನ್ಯ ಅಧ್ಯಕ್ಷಿಣಿಯರೇ, ಹೋಬಳಿ ಮಟ್ಟದಲ್ಲಿರುವ ನಾಡ ಕಚೇರಿಗಳ ಕೆಲಸಗಳೇನು ಎಂದು ಕೇಳಿದಾಗ, ಸುಮಾರು 20 ಪಾಯಿಂಟುಗಳನ್ನು ಬರೆದು ಕಳುಹಿಸಿದ್ದಾರೆ. ನಿಜವಾಗಿಯೂ ನೋಡಬೇಕಾದರೆ, ಈ ನಾಡ ಕಚೇರಿಗಳಲ್ಲಿ ಏನೂ ಸಿಕ್ಕುವುದಿಲ್ಲ. ಪಹಣಿ ಸಿಕ್ಕುವುದಿಲ್ಲ, ನೋ ಡ್ಯೂಸ್ ಸರ್ಟಿಫಿಕೇಟ್ ಸಿಕ್ಕುವುದಿಲ್ಲ, ಟೆನೆನ್ಸಿ ಸರ್ಟಿಫಿಕೇಟ್ ಸಿಕ್ಕುವುದಿಲ್ಲ, ಕ್ಯಾಸ್ಟ್ ಸರ್ಟಿಫಿಕೇಟ್ ಸಿಕ್ಕುವುದಿಲ್ಲ. ಮೇಲಾಗಿ ರೈತರು ನಾಡ ಕಚೇರಿಗೆ ಹೋಗಿ ಏನಾದರೂ ಮಾಹಿತಿ ಕೇಳಿದರೆ, ತಹಶೀಲ್ದಾರ್ ಆಫೀಸಿಗೆ ಹೋಗಿ ಎಂದು ಹೇಳುತ್ತಾರೆ. ಹಾಗಾದರೆ ನಾಡ ಕಚೇರಿಗಳ ಕೆಲಸ ಏನು? ಈ ನಾಡ ಕಚೇರಿಗಳನ್ನು ತೆಗೆಯುತ್ತೇವೆ ಎಂಬ ಒಂದು ನಿರ್ಧಾರವನ್ನು ತಾವು ಮಾಡುತ್ತಾ ಇಲ್ಲ. ಉಪ ತಹಶೀಲ್ದಾರ್, ಕಂದಾಯ ನಿರೀಕ್ಷಕರು ನಾಡ ಕಚೇರಿಯ ಹೆಡ್ ಕ್ವಾರ್ಟರ್‌ನಲ್ಲಿ ಇರುವುದಿಲ್ಲ. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳ ಉತ್ತರವೇನೆಂದು ಕೇಳಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಕೆಲವು ಕಡೆ ನಾಡ ಕಚೇರಿ ಮಾಡಿದ್ದೇವೆ, ಅಲ್ಲಿ ಉಪ ತಹಶೀಲ್ದಾರರು ಇರುವುದಿಲ್ಲ, ವಿಲೇಜ್ ಅಕೌಂಟೆಂಟ್ ಇರುವುದಿಲ್ಲ. ಅವರಿಗೆ ಮನೆ ಸಿಕ್ಕುವುದಿಲ್ಲವೆಂದು ಕೆಲವರು ಹೇಳುತ್ತಾರೆ, ಮತ್ತೆ ಕೆಲವು ಕಡೆ ಮನೆಗಳು ಸಿಕ್ಕಿದರೂ ಕೂಡ ಅವರು ಇರುವುದಿಲ್ಲ. ಇದರ ಬಗ್ಗೆ ಸ್ಪೆಸಿಫಿಕ್ ಆಗಿ ನನ್ನ ಗಮನಕ್ಕೆ ತಂದಿದ್ದೀರಿ, ಇದರ ಬಗ್ಗೆ ವಿವರವಾಗಿ ಎನ್‌ಕ್ವೈರಿ ಮಾಡಿಸಿ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ :– ಈ ನಾಡ ಕಚೇರಿ ಮಾಡಿದ್ದು, ಆ ಹೋಬಳಿ ಮಟ್ಟದ ರೈತರಿಗೆ, ಕೂಲಿಕಾರರಿಗೆ ಅನುಕೂಲವಾಗಲಿ ಎಂದು. ತಾವು ಒಂದು ಮಾತು ಹೇಳಿದಿರಿ, ಸಂತೋಷ. ಎಲ್ಲೆಲ್ಲಿ ದೂರುಗಳು ಬರುತ್ತವೆ, ಅಲ್ಲಿ ಅಧಿಕಾರಿಗಳು ಕೆಲಸ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆಂದು ಹೇಳಿದಿರಿ. ಆದರೆ, ಒಂದು ಮಾತು ಕೇಳಿದ್ದೇನೆ. ಈ ನಾಡ ಕಚೇರಿಗಳನ್ನು ಅಬಾಲಿಷ್ ಮಾಡುತ್ತೇವೆ ಎಂಬ ನಿರ್ಣಯಕ್ಕೆ ಸರ್ಕಾರದಲ್ಲಿ ಬರುತ್ತಾ ಇದೆಯೆಂದು ಕೇಳಿದ್ದೇನೆ. ಇದರ ಬಗ್ಗೆ, ಮಾನ್ಯ ಅಧ್ಯಕ್ಷರೆ ಮಾನ್ಯ ಸಚಿವರನ್ನು ಕೇಳುತ್ತಿದ್ದೇನೆ. ಇದರ ಬಗ್ಗೆ ಸರ್ಕಾರದ ನಿಲುವು ಏನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಇವುಗಳಿಂದ ಹೆಚ್ಚಿಗೆ ಪ್ರಯೋಜನವಾಗುತ್ತಾ ಇಲ್ಲವೆಂದು ತಾವು ಹೇಳುತ್ತಿದ್ದೀರಿ. ಈ ಮೊದಲು ಒಂದೆರಡು ಇದ್ದ ನಾಡ ಕಚೇರಿಗಳನ್ನು 1980–81ರಲ್ಲಿ ಸುಮಾರು ನೂರಕ್ಕೂ ಹೆಚ್ಚು ಕಡೆ ಸ್ಥಾಪನೆ ಮಾಡಿದೆವು. ತದನಂತರ ಬೊಮ್ಮಾಯಿಯವರ ಕಾಲದಲ್ಲಿ ಇನ್ನೂ ಹೆಚ್ಚಿಗೆ ಮಾಡಿದರು. ಬಹಳಷ್ಟು ಕಡೆ ಇವು ಸ್ಯಾಟಿಸ್‌ಫ್ಯಾಕ್ಟರಿ ವರ್ಕ್ ಮಾಡುತ್ತಾ ಇಲ್ಲ. ಅನೇಕ ಕಡೆ, ಇವುಗಳನ್ನು ಯಾವ ಉದ್ದೇಶಕ್ಕಾಗಿ ಮಾಡಿದ್ದೇವೆ, ಆ ಉದ್ದೇಶ ಪೂರ್ತಿಯಾಗುತ್ತಿಲ್ಲ ಎನ್ನುವ ವಾದ ಇದೆ. ಅದಕ್ಕಾಗಿ ನಾನು ಇದನ್ನು ಸಂಪೂರ್ಣವಾಗಿ ಪರಿಶೀಲನೆ ಮಾಡಿ ಯಾವ ಕಾರ್ಯಕ್ರಮ ತೆಗೆದುಕೊಳ್ಳಬೇಕೆನ್ನತಕ್ಕಂಥಾದ್ದನ್ನು ನಾನು ಸದನಕ್ಕೆ ತಿಳಿಸುತ್ತೇನೆ.

ಶ್ರೀ ಬಿ.ಎಸ್. ಚವಾಣ್ :– ಮಾನ್ಯ ಅಧ್ಯಕ್ಷರೇ, ಈ ನಾಡ ಕಚೇರಿಯನ್ನು ಇಟ್ಟುಕೊಳ್ಳುತ್ತೀರೋ ಅಥವಾ ಇಲ್ಲವೋ ಎನ್ನುವ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಮಾನ್ಯ ಮಂತ್ರಿಗಳು ಕೊಡಲಿಲ್ಲ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ ಹೇಳಿದರು ಗ್ರಾಮಲೆಕ್ಕಿಗರಿಗೆ ಎಲ್ಲಿ ವಾಸದ ಮನೆಗಳು ಇರುತ್ತವೆಯೋ, ಅಂತಹ ಕಡೆ ಅವರು ವಾಸವಾಗಿಲ್ಲ ಎನ್ನುವ ಬಗ್ಗೆ ದೂರನ್ನು ಅವರ ಗಮನಕ್ಕೆ ತಂದರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವ ಮಾತನ್ನು ಹೇಳಿದರು. ಆದರೆ ನನ್ನ ಒಂದು ಪ್ರಶ್ನೆ ಏನೆಂದರೆ, ತಾವು ಒಂದು ಪಟ್ಟಿ ತರಿಸಿ. ಯಾವ ಯಾವ ಹಳ್ಳಿಗಳಲ್ಲಿ ಯಾವ ಯಾವ ಗ್ರಾಮಗಳಲ್ಲಿ ಗ್ರಾಮಲೆಕ್ಕಿಗರಿಗೆ ಮನೆಗಳನ್ನು ಸರ್ಕಾರದ ವತಿಯಿಂದ ಕಟ್ಟಿಸಿಕೊಟ್ಟಿದ್ದಾರೆ, ಅಂತಹ ಮನೆಗಳಲ್ಲಿ ಯಾರ್ಯಾರು ವಾಸ ಮಾಡುತ್ತಿಲ್ಲ ಎಂದು ಆ ಮಾಹಿತಿ ತರಿಸಿ, ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಬಿ.ಎಸ್. ಯಡಿಯೂರಪ್ಪ :– ಮಾನ್ಯ ಅಧ್ಯಕ್ಷರೇ ಗ್ರಾಮಲೆಕ್ಕಿಗರ ಬಗ್ಗೆ ಸನ್ಮಾನ್ಯ ಹಿಂದಿನ ಕಂದಾಯ ಸಚಿವರು ಒಂದು ಮಾತು ಹೇಳಿದ್ದರು. ಏನೆಂದರೆ ಯಾವ ಗ್ರಾಮಲೆಕ್ಕಿಗರು ಅವರು ತಮ್ಮ ಕೆಲಸದ ಸ್ಥಾನಗಳಲ್ಲಿ ಅಂದರೆ ಕೇಂದ್ರ ಸ್ಥಾನಗಳಲ್ಲಿ ಇರುವುದಿಲ್ಲವೋ ಅಂತಹವರ ಮೇಲೆ ಕ್ರಮ ತೆಗೆದುಕೊಂಡು, ಅವರನ್ನು ಮನೆಗೆ ಕಳುಹಿಸುತ್ತೇನೆಂದು ಘೋಷಣೆ ಮಾಡಿದರು. ಆದರೆ ಮಾನ್ಯ ಸಚಿವರು ಮನೆಗಳು ಅಲ್ಲಿ ಇಲ್ಲದೆ ಇದ್ದರೆ ಬೇರೆ ಕಡೆ ಇರಬಹುದು ಎನ್ನುವ ಅಭಿಪ್ರಾಯ ಬರುವ ರೀತಿಯಲ್ಲಿ ಹೇಳಿದರು. ಆದರೆ ಅವರು ಹಳ್ಳಿಗಳಲ್ಲಿ ವಾಸ ಮಾಡಿದರೆ ಅವರಿಗೆ ಬೇಕಾದ ಅನುಕೂಲ ಮಾಡಿಕೊಡುವುದಕ್ಕೆ ನಾವು ಹಳ್ಳಿಯ ಜನ ತಯಾರಿದ್ದಾರೆ. ನಾವು ಅವರಿಗೆ ಮನೆ ಕಟ್ಟಿಸಿ ಕೊಡತಕ್ಕಂಥಾದ್ದಕ್ಕೆ ಆಗುವುದಿಲ್ಲ; ಆದ್ದರಿಂದ ಅವರು ಅಲ್ಲೇ ವಾಸ ಮಾಡುವಂತಹ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ :– ಮಾನ್ಯ ಅಧ್ಯಕ್ಷರೇ ನಾನು ಈಗಾಗಲೇ ಹೇಳಿದ್ದೇನೆ. ಯಾವ ಗ್ರಾಮಲೆಕ್ಕಿಗ ಆ ಊರಿನಲ್ಲಿ ಇರುವುದಿಲ್ಲವೋ, ಅಂದರೆ ಅವನನ್ನು ಎಲ್ಲಿ ಪೋಸ್ಟಿಂಗ್ಸ್ ಮಾಡುತ್ತೇವೆಯೋ, ಅಲ್ಲಿ ವಾಸ ಇರದಿದ್ದರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಸ್ಪಷ್ಟವಾಗಿ ಹೇಳಿದೆ. ನಾವು ಅವರಿಗೆ ಬೆಂಬಲ ನೀಡತಕ್ಕಂಥಾದ್ದು ಆಗಲಿ ಅಥವಾ ಅವರಿಗೆ ಸಹಾಯ ಮಾಡತಕ್ಕಂಥ ಪ್ರಶ್ನೆಯೇ ಇಲ್ಲ. ಕೆಲವು ಕಡೆ ವೀಕರ್ ಸೆಕ್ಷನ್‌ಗೆ ಸೇರಿದ ವಿಲೇಜ್ ಆಕೌಂಟೆಂಟ್ಸ್‌ಗೆ ವಾಸ ಮಾಡಲು ಮನೆ ಸಿಗುವುದಿಲ್ಲ. ಆಗ ಅವರು ನಾವೇನು ಮಾಡೋಣ ಸಾರ್ ಅಲ್ಲಿ ವಾಸ ಮಾಡಲು ಮನೆ ಸಿಗುವುದಿಲ್ಲ ಎಂದು ಹೇಳುತ್ತಾರೆ.

ಶ್ರೀ ಸಿ. ಬೈರೇಗೌಡ :– ಮನೆ ಇರುವ ಕಡೆ ಹಾಕಿ.

ಶ್ರೀ ಬಿ.ಎಸ್. ಯಡಿಯೂರಪ್ಪ :– ಶಾಸಕರು ಜವಾಬ್ದಾರಿ ತೆಗೆದುಕೊಳ್ಳುತ್ತೇವೆ. ಎಲ್ಲಿ ಯಾರಿಗೆ ಮನೆ ಸಿಗುವುದಿಲ್ಲ ಎಂದು ಹೇಳಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ :– ನಾನು ತಮಗೆ ಒಂದು ಉದಾಹರಣೆ ಹೇಳುತ್ತೇನೆ. ನಾನು ಎಜುಕೇಷನ್ ಮಿನಿಸ್ಟರ್ ಆಗಿದ್ದೆ. ಶಹಪುರ ತಾಲ್ಲೂಕು ಮಾನ್ಯ ಶಿವಶೇಕರಪ್ಪಗೌಡರ ಕ್ಷೇತ್ರ. ಒಬ್ಬ ಟೀಚರ್‌ಗೆ ಅಲ್ಲಿಗೆ ಪೋಸ್ಟ್ ಮಾಡಿದೆವು. ಅಲ್ಲಿ ಶಾಲೆ ಹನುಮ ದೇವಸ್ಥಾನದ ಗುಡಿಯಲ್ಲಿ ನಡೆಯುತ್ತಿತ್ತು. ಅಲ್ಲಿನ ಬೆಟರ್‌ಮೆಂಟ್ ಕಮಿಟಿಯವರು ಒಂದು ರೆಜುಲೂಶನ್ ಪಾಸ್ ಮಾಡಿ ಕಳುಹಿಸಿದರು. ನಮಗೆ ಎಸ್.ಸಿ. ಟೀಚರ್‌ನ್ನು ಪೋಸ್ಟ್ ಮಾಡಿದ್ದೀರಿ, ಅವರು ನಮಗೆ ಬೇಕಿಲ್ಲ ಎಂದು. ನಮ್ಮ ಶಾಲೆ ದೇವರ ಗುಡಿಯಲ್ಲಿ ನಡೆಯುತ್ತಿದೆ, ಆದ್ದರಿಂದ ಎಸ್.ಸಿ.ಯವರನ್ನು ಹಾಕಬೇಡಿ ಎಂದು ಹೇಳಿದರು. ಆಗ ಅವನು ಎಲ್ಲಿ ಇರಬೇಕು ಕೊನೆಗೆ ಆತ ನನ್ನ ಹತ್ತಿರ ಬಂದ, ನಾನು ಹೇಳಿದೆ ನೀನು ಸರ್ಕಾರದ ಬಿಲ್ಡಿಂಗ್ ಎಲ್ಲಿ ಇದೆ, ಅಂತಹ ಕಡೆ ಹಾಕಿಕೊಡುತ್ತೇನೆ ಅಲ್ಲಿ ಹೋಗು ಎಂದು ಹೇಳಿದೆ. ನಾನು ಒಂದು ಉದಾಹರಣೆ ಕೊಟ್ಟೆ ಅಷ್ಟೇ. ಕೆಲವು ಕಡೆ ಆಗುತ್ತದೆ, ಇಂಥಾದ್ದು ಒಂದು ಪರ್ಸೆಂಟ್ ಇಂತಹದ್ದು ಇರಬಹುದು ಅಥವಾ ಇಲ್ಲದೆ ಇರಬಹುದು, ಆದರೆ ಹಳ್ಳಿಗಳಲ್ಲಿ ವಿಲೇಜ್ ಆಕೌಂಟೆಂಟ್ ಮನೆಗಳು ಇದ್ದೂ ಕೂಡ ಅಲ್ಲಿ ವಾಸ ಮಾಡದೆ ಇದ್ದರೆ ಹಾಗೂ ಈ ಬಗ್ಗೆ ದೂರುಗಳು ಬಂದರೆ, ಅಂತಹವರ ಮೇಲೆ ಖಂಡಿತವಾಗಿ ಕ್ರಮ ತೆಗೆದುಕೊಂಡು ಅವರನ್ನು ಸಸ್‌ಪೆಂಡ್ ಮಾಡಿ ಮನೆಗೆ ಕಳುಹಿಸುತ್ತೇನೆ.

ಪ್ರಶ್ನೆ 514 (ಮಾನ್ಯ ಸದಸ್ಯರು ಹಾಜರಿರಲಿಲ್ಲ).

ರಾಷ್ಟ್ರೀಯ ಹೆದ್ದಾರಿ ಸಂಖ್ಯೆ

630 ಶ್ರೀ ಎಸ್. ಶಫಿ ಅಹಮದ್ (ತುಮಕೂರು) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಬಿ.ಹೆಚ್. ರಸ್ತೆ ಮತ್ತು ರಾಷ್ಟ್ರೀಯ ಹೆದ್ದಾರಿ 4ರ ಮಧ್ಯದಲ್ಲಿರುವ ಸಾರ್ವಜನಿಕ ಉಪಯೋಗಕ್ಕಾಗಿ ಕಾಯ್ದಿರಿಸಿದ ಜಮೀನನ್ನು ಉದ್ದೇಶಿತ ಭೂ ಸ್ವಾಧೀನ ನಡವಳಿಕೆಯಿಂದ ಕೈಬಿಡಲು ಕಾರಣಗಳೇನು;